ಮೈಸೂರ ಗೆಜೆಟ್.

ನಂ. 14 ಸರ್ಕಾರದಿಂದ ಫಾಯಿಸ್ ಆದ್ದು. ಸನ್ 1887.

ಬೆಂಗಳೂರು, ಶನಿವಾರ, ಏಪ್ರಿಲ್ ತಾ॥ 9, ಸನ್ 1887.

ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡ ಬಗ್ಗೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೇ ಭಾಗ–ಮೈಸೂರು ಮಹಾರಾಜ ರಾಜಾಸಾಹೆಬ್ ಬಹದೂರವರ ದಿವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

2ನೇ ಭಾಗ–ರೆಸಿಡೆಂಟರು, ಚೀಫ್ ಜಡ್ಜೀಯವರು, ಸೆರ್ವೆ ವ ಇ ಂ ಸೂಪರ್‌ಟೆಂಡೆಂಟರು, ಕಾಂಪ್ಟ್ರೋಲರವರು, ಪಬ್ಲಿಕ್ ವರ್ಕ್ಸ್ ಆಫೀಸರ್‌ಗಳು, ಫಾರೆಸ್ಟು ಇನ್‌ಸ್ಪೆಕ್ಟರ್ ಜನರಲ್‌ಯವರು, ರಿಜಿಸ್ಟ್ರೇರ್ಷ ಇನ್‌ಸ್ಪೆಕ್ಟರ್ ಜನರಲ್ಲವರು, ಅಂಚೇ ಬಕ್ಷೀರು, ಮ್ಯುನಿಸಿಪೆಲ್ ಬೋರ್ಡು ಸಿಡೆಂಟರು, ಡಿಸ್ಟ್ರಿಕ್ಟು ವ ಸೆರ್ಷ ಜಡ್ಜೀರು, ಡಿ॥ ಡೆಪ್ಯೂಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜೀರು, ಪೊಲೀಸ್ ಸೂಪರ್‌ಟೆಂಡೆಂಟರು, ಫಾರೆಸ್ಟು ಆಫೀಸರ್‌ಗಳು, ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ಗೈರೆ; ಕಾಲಸ್ಥಿತಿ ರಿಪೋರ್ಟುಗಳು ; ಪೋಸ್ಟ್‌ಆಫೀಸ್ ನೋಟೀಸ್‌ಗಳು.

3ನೇ ಭಾಗ–ಶ್ರೀಮ ಮಹಾರಾಜ ರಾಜಾಸಾಹೆಬ್ ಬಹದೂರವ ಂದ ಮಂಜೂರ್ಮಾಡಲ್ಪಟ್ಟಆಕ್ಟುಗಳು ವ ರೆಗ್ಯುಲೇರ್ಷಗಳು,

1887ನೇ ಇಸವಿಯ 1ನೇ ನಂ. ರೆಗ್ಯುಲೇರ್ಷ

4ನೇ ಭಾಗ–ಸರ್ಕಾರೀ ಕಾಗದ ಪತ್ರಗಳು—ಇಲ್ಲ.

೧ನೇ ಭಾಗ.

ಶ್ರೀಮನ್ಮಹಾರಾಜ ರಾಜಾಸಾಹೆಬ್ ಬಹದೂರವರ ದಿವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ನರಲ್.

ಇಸ್ತಿಹಾರ್‌ನಾಮೆಗಳು.

ತಾರೀಖು 1ನೇ ಮಾರ್ಚೀ 1887.

ನಂ. 260.—ಕಾಲೆಯಾತೆ ಹೋಗತಕ್ಕ ಜನಗಳಿಗೆ ದರಿಂದ ಯಚ್ಚರಿಸುವದೇನಂದರೆ, ಕಾಲೆಯಲ್ಲಿ ಅಪಾಯಕರವಾದ ಮಾರಿ ಕಾ ಉಪದ್ರವ ವ್ಯಾಪಿಸಿರುವದಾಗಿ ಸದರೀ ಸ್ಥಳದ ಕಲೆಕ್ಟರ ಡಿಸ್ಟ್ರಿಕ್ಟು ಮಾಜಿಸ್ಟ್ರೇಟರಿಂದ ತಿಳಿಯಬಂದಿರುತ್ತೆ.

ತಾರೀಖು 18ನೇ ಮಾರ್ಚೀ 1887.

ಕ್ಯಾಂಪ್ ನಂ. 2042.—ಕೋಲಾರ ಡಿಸ್ಟ್ರಿಕ್ಟಿನೊಳ ಣ ಇದರಡೀ ಕಂಡ ಗ್ರಾಮಗಳ ವರ್ಗಾವರ್ಗಿಯು 1887ನೇ ಇಸವಿ ಏಪ್ರಿಲ್ ಗುರ್ತೇ ಲಾಗಾಯತು ಜಾರಿಯಲ್ಲಿ ಬರತಕ್ಕದ್ದೆಂದು ವ ಜೂರ್ಮಾಡಲ್ಪಟ್ಟಿರುತ್ತೆ.

ಕೋಲಾರ ಡಿಸ್ಟ್ರಿಕ್ಟು ಮಾಲೂರು ತಾಲ್ಲೂಕಿನಿಂದ ಬೆಂ ಳೂರು ಡಿಸ್ಟ್ರಿಕ್ಟು ಹೊಸಕೋಟೆ ತಾಲ್ಲೂಕಿಗೆ:—

1. ದಬ್ಬಕುಂಟೆ (ಸರ್ಕಾರಿ)
2. ಅಂಬಲಿಪುರ (ಜೋಡಿ)

ತಾರೀಖು 10ನೇ ಮಾರ್ಚ್ 1887.

ಕ್ಯಾಂಪ್ ನಂ. 1874.—ಕಾಫಿ ಸಾಗುವಳಿ ಬಗ್ಯೆ 1885ನೇ ಇಸವಿ ಮಾರ್ಚ್ 24ನೇ ಮತ್ತು 242ನೇ ನಂಬರ್ ಇಸ್ತಿಹಾರ್ ನಾಮೆಯ 9ನೇ ಕಲಂ ಅನುಸರಿಸಿ ಸರ್ಕಾರ್ ಬಂಜರ್ ಜಮೀನುಗಳನ್ನು ಕೊಡುವ ವಿಷಯದಲ್ಲಿ ಇದರಡಿ ಕಂಡ ರೂಲ್ಸ್‌ಯಾನೆ ನಿಬಂಧನೆಗಳು ಸರ್ವರ ತಿಳುವಳಿಕೆ ಮತ್ತು ನಡವಳಿಕೆ ಬಗ್ಯೆ ಪ್ರಕಟಿಸಲ್ಪಡುತ್ತೆ:—

I. ಕಾಫಿ ಸಾಗುವಳಿ ಬಗ್ಯೆ ಜಮೀನಿಗೋಸ್ಕರ ದರಖಾಸ್ತುಗಳು ಪ್ರಥಮತಃ ಅಮಲ್ದಾರ್ರಲ್ಲಿ ಕೊಡಲ್ಪಡತಕ್ಕದ್ದು, ಮತ್ತು ಸದರೀ ದರಖಾಸ್ತಿನಲ್ಲಿ ಡಿಟೋ ಜಮೀನು ಇರತಕ್ಕ ಹೋಬಳಿ ಗ್ರಾಮ ವ ಅದರ ಬೀಜವರಿ ಮತ್ತು ಸರ್ವೆ ನಂಬರು ಸುದಾ ವಿವರಿಸತಕ್ಕದ್ದು.

II. ದರಖಾಸ್ತು ಮಾಡಲ್ಪಟ್ಟ ಜಮೀನು 50 ಎಕರೆಗಳಿಗಿಂತ ಜಾಸ್ತಿಯಾಗಿ ಇರುವ ಪಕ್ಷದಲ್ಲಿ, ಒಬ್ಬ ಮೇಲ್ಪಟ್ಟ ರೆವಿನ್ಯೂ ಆಫೀಸರರಿಂದಲೂ ಮತ್ತು ಸದರೀ ಜಮೀನು ಹೆಚ್ಚು ಕ್ರಯ ಬಾಳುವ ಜಂಗಲ್ ಪ್ರದೇಶಗಳಲ್ಲಿ ಇರುವ ಪಕ್ಷದಲ್ಲಿ ಫಾರೆಸ್ಟ್ ಆಫೀಸರರಿಂದಲೂ ನೋಡಿ ತನಿಖೆ ಮಾಡಲ್ಪಡತಕ್ಕದ್ದು.

III. ಯಲ್ಲಾ ಸಂದರ್ಭಗಳಲ್ಲೂ ಸದರೀ ಜಮೀನು ಸಾಗುವಳಿ ಬಗ್ಯೆ ಕೊಡುವ ವಿಷಯದಲ್ಲಿ ನೆರೆ ಹೊರೆ ಗ್ರಾಮಸ್ತರ ಮತ್ತು ಫಾರೆಸ್ಟ್ ಇಲಾಖೆಯ ಹಕ್ಕುದಾರಿ ಮತ್ತು ಪ್ರಯೋಜನಗಳಿಗೆ ಅಭ್ಯಂತರವಿಲ್ಲವೆಂಬ ವಿಷಯದಲ್ಲಿ ಕ್ರಮವಾದ ವಿಚಾರಣೆಯು ನಡಿಸಲ್ಪಡತಕ್ಕದ್ದು.

IV. ಸಾಧಾರಣವಾಗಿ 200 ಯಕರೆಗಳಿಗಿಂತಲೂ ಜಾಸ್ತೀ ವಿಸ್ತೀರ್ಣವುಳ್ಳ ಜಮೀನಿಗಾಗಿ ಯಾವ ದರಖಾಸ್ತೂ ಅಂಗೀಕರಿಸಲ್ಪಡಕೂಡದು. ಪರಂತು ದರಖಾಸ್ತುದಾರನು ಜಾಸ್ತೀ ಬೀಜವರಿವುಳ್ಳ ಜಮೀನನ್ನು ನ್ಯಾಯವಾದ ವಾಯಿದೆ ಒಳಗೆ ಸಾಗುವಳೀ ಮಾಡುವದಕ್ಕೆ ಶಕ್ತನೆಂಬದಾಗಿ ಡೆಪ್ಯೂಟಿ ಕಮ್ಮಿಷನರವರು ತೃಪ್ತಿಪಡುವಂಥಾ ವಿಶೇಷ ಸಂದರ್ಭಗಳಲ್ಲಿ ಅವರಿಗೆ ಯುಕ್ತತೋರುವಷ್ಟು ವಿಸ್ತೀರ್ಣವುಳ್ಳ ಜಮೀನಿಗೋಸ್ಕರ ದರಖಾಸ್ತು ಅಂಗೀಕರಿಸಲ್ಪಡಬಹುದು.

V. ಅಮೌಲ್ಯವಾದ ವಿಶೇಷ ಮರಗಳು ಯಿದ್ದು ಅವುಗಳು ಫಾರೆಸ್ಟ್ ಇಲಾಖೆ ಮುಖಾಂತ್ರ ಸಾಪಾಡಲ್ಪಟ್ಟು ಅಭಿವೃದ್ಧಿ ಮಾಡಲ್ಪಡಬೇಕೆಂದು ಗವರ್ಮೆಂಟಿನವರು ಅಭಿಪ್ರಾಯ ಪಡುವಂಥಾ ಯಾವ ಜಮೀನೇ ಆಗಲೀ ಕಾಫೀ ಸಾಗುವಳೀ ಬಗ್ಯೆ ಯಾವಾಗ್ಯೂ ಕೊಡಲ್ಪಡಕೂಡದು.

VI. ದರಖಾಸ್ತುಮಾಡಲ್ಪಟ್ಟ ಜಮೀನು ಕೊಡಲ್ಪಡುವ ಬಗ್ಯೆ ಯಾವ ಅಭ್ಯಂತರವೂ ಯಿಲ್ಲವೆಂಬದಾಗಿ ವಿಚಾರಣೆ ಮೂಲಕ ತಿಳಿಯಬಂದಾಗ, ಅದು ಡಿಮಾರ್ಕೇಟ್ ಯಾನೆ ಹದ್ದುಮಾಡಲ್ಪಟ್ಟು ಇದರಡಿ ಗೊತ್ತು ಮಾಡಲ್ಪಟ್ಟ ಸರ್ಕಾರ್ ಸವಾಲಿಗೆ ಬಳಪಟ್ಟು ಬಹಿರಂಗವಾದ ಹರಾಜ್ ಮೂಲಕ ವಿಕ್ರಯಿಸಲ್ಪಡತಕ್ಕದ್ದು.

ದರಯಕರೆ ವಂದಕ್ಕೆ ಹತ್ತು ರೂಪಾಯಿ ಪ್ರಕಾರ.

1. ಹಾಸನ ಡಿಸ್ಟ್ರಿಕ್ಟ್ ಮುಳಿ.
2. ಕಡೂರು ಡಿಸ್ಟ್ರಿಕ್ಟಿನ ಕಡೂರು ಮತ್ತು ತರೀಕೆರೆ ತಾಲ್ಲೂಕುಗಳಲ್ಲಿ.
3. ಖಾಂಡ್ಯ ವ ಜಾಗರ ಮಾಗಣಿಗಳ ವಿನಾ ಚಿಕ್ಕಮಗಳೂರು ತಾಲ್ಲೂಕಿನಲ್ಲಿ.
4. ಕಳಸ (ಮೂವಿನಕೆರೆ) ವ ಸಂಸೆ ಮಾಗಣಿಗಳು ಮತ್ತು ಭದ್ರಾನದಿಯ ಕೊರಕಲು ವಿನಾ ಮೂಡಿಗೆರೆ ತಾಲ್ಲೂಕಿನಲ್ಲಿ.

ದರಯಕರೆ ವಂದಕ್ಕೆ ಐದು ರೂಪಾಯಿ ಪ್ರಕಾರ.

1. ಚಿಕ್ಕಮಗಳೂರು ತಾಲ್ಲೂಕು ಖಾಂಡ್ಯ ವ ಜಾಗರ ಮಾಗಣಿಗಳಲ್ಲಿ.
2. ಮೂಡಗೆರೆ ತಾಲ್ಲೂಕು ಕಳಸ(ಮೂವಿನಕೆರೆ) ವ ಸಂಸೆ ಮಾಗಣಿಗಳಲ್ಲೂ ಮತ್ತು ಭದ್ರಾನದಿ ಕೊರಕಲು ಸುದಾ
3. ಕೊಪ್ಪಾ ತಾಲ್ಲೂಕಿನಲ್ಲಿ, ಯಡೆಪಳ್ಳಿ ಸಬ್ ಡಿವೀಜ್ಯ ದೇಖೀಲ್.

VII. ಮೇಲೆ ಗೊತ್ತು ಮಾಡಲ್ಪಟ್ಟಂತೆ ಸರ್ಕಾರ್ ಸವಾಲ್‌ಮೊಬಲಗಿನಲ್ಲಿ ಸರ್ವೆ ಖರ್ಚುಗಳು ಮತ್ತು ಗವರ್ಮೆಂಟಿಗೆ ಯಾವಾಗ್ಯೂ ನಿರಾತಂಕವಾಗಿ ಉಳಿಸಿಕೊಳ್ಳಲ್ಪಟ್ಟ ಸಂದಲ್ ಮರಗಳು ಅಲ್ಲದೆ ಮತ್ತು ಇತರ ತಮಾಂ ಮನ್ನಾಜಾತಿ ಮರಗಳ ವಿಷಯದಲ್ಲಿ ಗವರ್ಮೆಂಟಿಗೆ ಇರುವ ಹಕ್ಕುದಾರಿಯು ಸುದಾ ಅಡಗಿರತಕ್ಕದ್ದು.

VIII. ಜಮೀನು ಹರಾಜ್ ಮಾಡಲು ಪ್ರಸಿದ್ಧಪಡಿಸುವದಕ್ಕೆ ಮುಂಚೆವಾಗಿ ದರಖಾಸ್ತುದಾರನು ಮೇಲೆ ಗೊತ್ತು ಮಾಡಲ್ಪಟ್ಟ ಸರ್ಕಾರ್ ಸವಾಲ್ ಮೊಬಲಗಿನ ನಾಲ್ಕರಲ್ಲಿ ಒಂದು ಭಾಗವನ್ನು ಡೆಪ್ಯೂಟಿ ಕಮ್ಮಿಷನರವರಲ್ಲಿ ತೇವಣಿ ಇಡತಕ್ಕದ್ದು.

IX. ಉದ್ದೇಶಿಸಲ್ಪಟ್ಟ ತಮಾಂ ಪುರೋಖ್ತುಗಳ ಪೂರಾ ನೋಟೀಸುಗಳು ನೆರೆಹೊರೆ ಗ್ರಾಮಗಳಲ್ಲಿ ಘಾಯಿಷ್ಮಾಡಲ್ಪಡತಕ್ಕದ್ದು. ಮತ್ತು 50 ಎಕರೆಗಳಿಗಿಂತ ಜಾಸ್ತಿ ವಿಸ್ತೀರ್ಣವುಳ್ಳ ಪ್ರದೇಶಗಳ ತಮಾಂ ಪುರೋಖ್ತುಗಳೂ ಸರ್ಕಾರ್ ಗೆಜಟಿನಲ್ಲಿ ಪ್ರಕಟಿಸುವದರ ಮೂಲಕ ಪ್ರಸಿದ್ಧಪಡಿಸಲ್ಪಡತಕ್ಕದ್ದು.

X. ಸದರೀ ಹರಾಜ್ ಜಾರೀಲಿರುವ ಷರತ್ತುಗಳನುಸ[illegible] ಬಹಿರಂಗವಾಗಿ ನಡಿಸಲ್ಪಡತಕ್ಕದ್ದು, ಮತ್ತು ಗೊತ್ತು ಮಾಡಲ್ಪಟ್ಟ ಸರ್ಕಾರ್ ಸವಾಲ್ ಮೊಬಲಗಿಗೆ ಮೇಲ್ಪಟ್ಟು ಕಡದರಖಾಸ್ತುದಾರನಿಗೆ ಜಮೀನು ವಿಕ್ರಯಿಸಲ್ಪಡತಕ್ಕದ್ದು. ದರಖಾಸ್ತುದಾರನಿಂದ ಕೇವಣಿ ಇಡಲ್ಪಟ್ಟ ಸರ್ಕಾರ್ ಸವಾಲ್ ಮೊಬಲಗಿನ ನಾಲ್ಕರಲ್ಲಿ ಬಂದು ಭಾಗದ ಮೊಬಲಗು ಸದರೀ ಜಮೀನು ದರಖಾಸ್ತುದಾರನಿಗೆ ಹರಾಜಿನಲ್ಲಿ ವಿಕ್ರಯಿಸಲ್ಪಟ್ಟರೆ ಪುರೋಭ್ತು ಮೊಬಲಗಿಗೋಸ್ಕರ ಶೇಕಡಾ 25ರ ಪ್ರಕಾರ ಕೊಡಬೇಕಾದ ಮೊಬಲಗಿಗೋಸ್ಕರ ಜಮೆ ಕಟ್ಟಲ್ಪಡತಕ್ಕದ್ದು, ಮತ್ತು ಸದರೀ ಜಮೀನು ಯಾವ ಇತರ ಯಾರಿಂದಲಾಗಲಿ ಕೊಂಡುಕೊಳ್ಳಲ್ಪಟ್ಟರೆ ಸದರಿ ಮೊಬಲಗು ಡಿಪಾಜಿಟ್‌ದಾರನಿಗೆ ವಾಪಸ್ ಮಾಡಲ್ಪಡತಕ್ಕದ್ದು.

XI. ಮೇಲ್ಕಂಡ ರೂಲ್ಸ್ ಪ್ರಕಾರ ಪುರೋಭ್ತು [illegible]ಡಲ್ಪಟ್ಟ ಜಮೀನುಗಳಿಗೆ ಮೊದಲ್ ಮೂರು ವರುಷಗಳ ಪರಿಯಂತ ಯಾವ ಕಂದಾಯವೂ ತೆರಬೇಕಾದ್ದಿಲ್ಲವು; ತರುವಾಯ ಯರಡು ವರುಷಗಳಿಗೆ ಅರ್ಧಕಂದಾಯ ವಸೂಲ್ ಮಾಡಲ್ಪಡತಕ್ಕದ್ದು. ಆರನೇ ವರುಷದಾರಭ್ಯ ಪೂರಾ ಕಂದಾಯ ವಸೂಲ್ ಮಾಡಲ್ಪಡತಕ್ಕದ್ದು. ಪರಂತು ಈ ರಿಯಾಯತಿ ತೋರಿಸುವದಕ್ಕೆ ಮುಂಚಿತವಾಗಿ, ದರಖಾಸ್ತುದಾರನು, ಸದರೀ ಜಮೀನಿನಲ್ಲಿರತಕ್ಕ ಮರಗಳು ಕಡದ ತರುವಾಯ ಯಾ ಅದರ ಯಾವ ಭಾಗವನ್ನಾಗಲಿ ಅನ್ಯಥಾ ಬೈಲು ಮಾಡಿದನಂತರ ಸದರೀ ಜಮೀನಿನಲ್ಲಿ ಅಡಗಿ ಯಿರತಕ್ಕ ಸಾಗುವಳೀ ಲಾಯಖ್ ಭಾಗವನ್ನ ಸಾಗುವಳೀ ಮಾಡುವದಕ್ಕೆ ವಾಸ್ತವ್ಯವಾಗಿ ಪ್ರಯತ್ನ ಪಡದೆ ಸದರೀ ಜಮೀನನ್ನ ರಾಜೀನಾಮೆ ಮೂಲಕ ಒಪ್ಪಿಸಿ ಬಿಡುವ ಪಕ್ಷದಲ್ಲಿ ಮೊದಲ್ ವರುಷದ ಲಾಗಾಯತು ಪೂರಾ ಕಂದಾಯ ಕೊಡುವದಕ್ಕೆ ಬದ್ಧನಾಗಿ ಮುಚ್ಚಲಿಕೆ ಬರೆದು ಕೊಡತಕ್ಕದ್ದು.

ತಾರೀಖು 17ನೇ ಮಾರ್ಚಿ 1887.

ಕ್ಯಾಂಪ್ ನಂ. 2014.—ಮಳವಳ್ಳಿ ಅಮಲ್‌ದಾರ್ ನಂಜುಂಡ ಮೊದಲಿಯಾರ್ರಿಗೆ, 1887ನೇ ಇಸವಿ ಏಪ್ರೆಲ್ 1ನೇ ಮುಕ್ತಂ ಲಾಗಾಯತು ಯಾ ಅವರು ಉಪಯೋಗಿಸಿಕೊಂಡ ತಾರೀಖು ಮೊದಲು ಮೂರು ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ತಾರೀಖು 22ನೇ ಮಾರ್ಚಿ 1887.

ಕ್ಯಾಂಪ್ ನಂ. 2126.—1884ನೇ ಇಸವಿ ಡಿಸಂಬರ್ 6ನೇ ಮುಕ್ತಂ 5063—107ನೇ ನಂಬರ್‌ವುಳ್ಳ ದಿವಾನರವರ ಪ್ರೊಸಿಡಿಂಗ್ಸ್ ಷರತ್ತು ಅನುಸರಿಸಿ ಕೋಲಾರದ ಅಮಲ್‌ದಾರ್ ನಿಜಾಮುದ್ದೀನ್ ಅಲ್ಲೀಖಾರಿಗೆ, ಅವರು ಉಪಯೋಗಿಸಿಕೊಳ್ಳುವ ತಾರೀಖು ಲಾಗಾಯತು 15 ದಿವಸಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ತಾರೀಖು 26ನೇ ಮಾರ್ಚಿ 1887.

ಕ್ಯಾಂಪ್ ನಂ. 2154.—ಮೂರನೇ ಕ್ಲಾಸ್ ಆಸ್ಪಿಟಲ್ ಅಸಿಸ್ಟೆಂಟ್ ಜಾರ್ಜ್ ಟೈಲರ್‌ಗೆ, 1887ನೇ ಇಸವಿ ಫಿಬ್ರವರೀ 5ನೇ ಮುಕ್ತಂ ಲಾಗಾಯತು 2ನೇ ಕ್ಲಾಸಿಗೆ ಬಡ್ತಿ ಮಾಡಲ್ಪಟ್ಟಿರುತ್ತೆ.

ಕ್ಯಾಂಪ್ ನಂ. 2188.—ಇದರಿಂದ ಪ್ರಕಟಪಡಿಸುವದೇನಂದರೆ, ಚಾಮರಾಜನಗರ ಮತ್ತು ಗುಂಡ್ಲುಪೇಟೆ ತಾಲ್ಲೂಕುಗಳಿಗೋಸ್ಕರ 1877ನೇ ಇಸವಿ ಜೂನ್ 13ನೇ ಮುಕ್ತಂ 72ನೇ ನಂಬರ್‌ವುಳ್ಳ ಲೇಟ್ ಚೀಫ್ ಕಮ್ಮಿಷನರವರ ಇಸ್ತಿಹಾರ್‌ನಾಮೆಯಲ್ಲಿ ಕೊಂಬಿನ ಭರ್ತಿ ಭಂಡಿ 1ಕ್ಕೆ ರೂಪಾಯಿ 1—4—0 ಯಂತೆ ಗೊತ್ತುಮಾಡಲ್ಪಟ್ಟ ದರವು, ಭಂಡಿಬೋಜೆ ವಂದಕ್ಕೆ ರೂ. 2—8—0 ಕ್ಕೆ ಜಾಸ್ತಿ ಮಾಡಲ್ಪಟ್ಟಿರುತ್ತೆ.

ತಾರೀಖು 1ನೇ ಏಪ್ರೆಲ್ 1887.

ಮೈಸೂರು ಕವಿನ್ಯು ಸರ್ವೆಗೆ ಸೇರಿದ ಫಾರೆಸ್ಟು ಅಸಿಸ್ಟೆಂಟ್ ಕ್ವಾರ್ಟರ್‌ವೇಟರ್ ಮೌ|| ಟಿ. ಅಬ್ದುಲ್ ಕರೀಂಯವರಿಗೆ, 1887ನೇ ಇಸವಿ ಜನವರೀ 17ನೇ ಮುಕ್ತಂ ಲಾಗಾಯತು 17 ದಿವಸಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ಹುಕ್ಕುಂ ಬಮೋಜೀಬ್,
ಆರ್. ವಿಜಯೀಂದ್ರರಾವ್,
ಚೀಫ್ ಸೆಕ್ರಿಟೇರಿ.